**ದಿನಾಂಕಃ 29/11/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ಶ್ರೀ ಜೆ.ಎಸ್.ಎನ್ ವಕೀಲರಿಂದಃ**

5. ಆರೋಪಿತನಿಗೆ ನೀವು ಕಳುಹಿಸಿದ ತಲುಪಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ತಿಳಿದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಪಿ.3 ರಲ್ಲಿ 50 ಸಾವಿರ ಎಂದು ಬರೆದಿದೆ. ನಿಪಿ.1 ರಲ್ಲಿ ನಮೂದಿಸಿರುವ ಮೊತ್ತಕ್ಕೂ ನಿಪಿ.3 ರಲ್ಲಿ ನಮೂದಿಸಿರುವ ಮೊತ್ತಕ್ಕೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ.3 ನ್ನು ಪ್ರಶ್ನಿಸಲು ನನಗೆ ತೊಂದರೆ ಇರಲಿಲ್ಲ. ನೋಟೀಸು ಆರೋಪಿತನಿಗೆ ತಲುಪಿಲ್ಲ, ಅಂಚೆ ಅಧಿಕಾರಿಗಳೊಂದಿಗೆ ಶಾಮೀಲಾಗಿ ಷರಾ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

6. ನಿಪಿ.1 ರ ಮೇಲೆ 4 ಅಂಕಿಯ ಖಾತಾ ಸಂಖ್ಯೆ ಇದೆ ಎಂದರೆ ಸರಿ. ನಿಪಿ.2 ರಲ್ಲಿರುವ ಖಾತಾ ಸಂಖ್ಯೆಗೂ ನಿಪಿ.1 ರಲ್ಲಿರುವ ಖಾತಾ ಸಂಖ್ಯೆಗೂ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.1 ನ್ನು ಯಾವ ದಿನಾಂಕದಂದು ಬ್ಯಾಂಕಿಗೆ ಹಾಜರುಪಡಿಸಿದೆ ಎಂದರೆ Idea ಇಲ್ಲ ಎಂದು ನುಡಿಯುತ್ತಾರೆ. ನಿಪಿ.1 ಸಿಟಿಎಸ್ ಚೆಕ್ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ.1 ರದ್ದಾಗಿರುವಂತಹ ಚೆಕ್ಕನ್ನು ಬ್ಯಾಂಕ್ ಅಧಿಕಾರಿಗಳೊಂದಿಗೆ ಶಾರೀಕಾಗಿ ಹಾಜರುಪಡಿಸಿದಂತಹ ಚೆಕ್ ಎಂದರೆ ಸರಿಯಲ್ಲ. ಆರ್.ಬಿ.ಐ ಸುತ್ತೋಲೆ ದಿಃ22/02/2010 ರಂತೆ ಸಿಟಿಎಸ್ ಚೆಕ್ ಎಂದರೆ ನನಗೆ ಗೊತ್ತಿಲ್ಲ. Indian Bank Association & National Payment Corporation of India ಪ್ರಕಾರ ರದ್ದಾಗಿರುವಂತಹ ಚೆಕ್ ಎಂದರೆ ನನಗೆ ಗೊತ್ತಿಲ್ಲ. ಅದರ ನಂತರ MICR ಪ್ರಕಾರ ಚೆಕ್ ಇರಬೇಕು ಎಂದರೆ ನನಗೆ ಗೊತ್ತಿಲ್ಲ. ಸಿಟಿಎಸ್ ನಿಯಮದ ಪ್ರಕಾರ Watermark ಮತ್ತು ಬ್ಯಾಂಕಿನ ಲೋಗೋ ಇರಬೇಕು ಎಂದರೆ ನನಗೆ ಗೊತ್ತಿಲ್ಲ. ಮೇಲಿನ ಎಲ್ಲಾ ನಿಯಮಗಳು ಬ್ಯಾಂಕಿನ ಮ್ಯಾನೇಜರಿಗೆ ಗೊತ್ತಿರುತ್ತದೆ ಎಂದರೆ ಇರಬಹುದು. ಅವಶ್ಯಕತೆ ಇದ್ದರೆ ಮ್ಯಾನೇಜರ್ ನ್ನು ವಿಚಾರಣೆ ಮಾಡಿಸುತ್ತೇನೆ.

7. ನನ್ನ ಹೆಸರಿನಲ್ಲಿ ಬಿಪಿಎಲ್ ಕಾರ್ಡ್ ಇಲ್ಲ, ಎಪಿಎಲ್ ಕಾರ್ಡ್ ಇದೆ. ಅದನ್ನು ಹಾಜರುಪಡಿಸುತ್ತೇನೆ. ನನಗೆ ಐದು ಲಕ್ಷ ಸಾಲ ಕೊಡುವಷ್ಟು ಸಾಮರ್ಥ್ಯ ಇದ್ದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ. ಆರೋಪಿತ 2009 ರಿಂದ

ಪಡೆಯುತ್ತಿದ್ದ ಹಣದ ಬಗ್ಗೆ ಲೆಕ್ಕ ದಾಖಲಾತಿ ಪಡೆದಿಲ್ಲ. ಆರೋಪಿತ ನನ್ನಿಂದ ಪಡೆದಿದ್ದ ಎಲ್ಲಾ ಹಣವನ್ನೂ ಹಿಂದಿರುಗಿಸಿದ್ದಾರೆ, ಅದರ ಬಗ್ಗೆ ನಾನು ಎಲ್ಲಾ ದಾಖಲಾತಿಗಳನ್ನು ಬರೆದುಕೊಟ್ಟು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ರೂ.6,50,000/- ಗಳನ್ನು ಅಂದರೆ ಬಡ್ಡಿ ಸೇರಿಸಿ ಪಡೆದಿದ್ದು, ಅದರ ಬಗ್ಗೆ ಆರೋಪಿತನಿಗೆ ಚೀಟಿ ಬರೆದುಕೊಟ್ಟಿದ್ದೆ ಎಂದರೆ ಸರಿಯಲ್ಲ. ಪಿರ್ಯಾದಿಯಲ್ಲಿ ನಮೂದಿಸಿರುವ ಹಣವನ್ನು ನಾನು ಆರೋಪಿತನಿಗೆ ಕೊಡದೇ ಇದ್ದರೂ ಸಹ ಅನ್ಯತಾ ಪಾಯಿದೆ ಹೊಂದಲು ಸುಳ್ಳು ಪಿರ್ಯಾದು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ರದ್ದಾಗಿರುವಂತಹ ಚೆಕ್ಕನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕ್ ಅಧಿಕಾರಿಗಳೊಂದಿಗೆ ಶಾರೀಕಾಗಿ ನಿಪಿ.1 ಚೆಕ್ ಸಿಟಿಎಸ್ ಪ್ರಕಾರ ಇಲ್ಲದಿದ್ದರೂ, ಸುಳ್ಳು ಹಿಂಬರಹವನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ಆರೋಪಿತ ನನಗೆ ಯಾವುದೇ ಹಣವನ್ನು ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಮತ್ತು ಪಿರ್ಯಾದಿಯಲ್ಲಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಅವರಿಗೆ ಬರೆದುಕೊಟ್ಟ ಲೆಕ್ಕಪತ್ರದ ಚೀಟಿಯಲ್ಲಿ ನಾನೇ ಬರೆದುಕೊಟ್ಟು ಸಹಿ ಮಾಡಿದ್ದರೂ ಸಹ ಬರೆದುಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

8. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ಕೃಷಿ ಮೂಲದ ಆದಾಯ ಹೊಂದಿಲ್ಲ. ನಾನು ಎಸ್.ಬಿ.ಎಂ, ಪಿರಿಯಾಪಟ್ಟಣ ಶಾಖೆಯಿಂದ ಕಾವೇರಿ ಗ್ರಾಮೀಣ ಬ್ಯಾಂಕ್ ಕಂಪಲಾಪುರಕ್ಕೆ ನಗದೀಕರಣಕ್ಕೆ ಕಳುಹಿಸಿದ್ದೆನು.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**